Reg. No. | | | | | | | | | | | | |

# BASKALN 102/HRDKALN 102/BSWKALN 102/ BVAKALN 102

**I Semester B.A./B.A.(HRD)/B.S.W./B.V.A. Examination,**
**December 2023/January 2024**
**(NEP – 2020) (2022 – 23 Batch Onwards)**
**KANNADA**
**Kannada Language**

Time : 2 Hours Max. Marks : 60

S.D.M.C. OF BUSINESS MANAGEMENT LIBRARY
Shri Dharmasthala Manjunatheshwara College of Business Management Library MANGALORE - 575 003

I. ಕೆಳಗಿನ **ಮೂರು** ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿರಿ. **(3×8=24)**

1) ''ಕನ್ನಡ ನಾಡಿನ ಹಾಡು'' ಕವನದಲ್ಲಿ ಚಿತ್ರಿತವಾಗಿರುವ ನಾಡು–ನುಡಿ ಅಭಿಮಾನವನ್ನು ವಿಶದಪಡಿಸಿರಿ.

**ಅಥವಾ**

''ಧ್ಯಾನಸ್ಥ'' ಕವನವು ಸಾರ್ಥಕ ಬದುಕಿಗೆ ಹೇಗೆ ಸಂವಾದವಾಗಿ ನಿಲ್ಲುತ್ತದೆ ? ವಿವರಿಸಿರಿ.

2) ವಚನ ಸಾಹಿತ್ಯ ಮತ್ತು ದಾಸ ಸಾಹಿತ್ಯದ ಚಿಂತನಾ ಕ್ರಮಗಳು ರೂಪುಗೊಂಡ ಬಗೆ ಹೇಗೆ ? ಅವುಗಳ ಸಮಾಜಮುಖಿ ಒಳನೋಟಗಳನ್ನು ವಿವರಿಸಿರಿ.

**ಅಥವಾ**

ಊರು ಬಿಟ್ಟು ಹೊರಟ ಗುತ್ತಿ–ತಿಮ್ಮಿಯರ ಪರದಾಟ, ಹೋರಾಟವನ್ನು ವರ್ಣಿಸಿರಿ.

3) ಚಿತ್ರಲೇಖನ ಮತ್ತು ಪ್ರಬಂಧ ರಚನೆಗಳ ಕುರಿತು ಮಾಹಿತಿ ನೀಡಿರಿ.

**ಅಥವಾ**

ಹಾಡುಗಾರ್ತಿ ತರುಣಿಯೊಬ್ಬಳ ಮನಕ್ಕೆ ವಿದ್ವಾಂಸರೊಬ್ಬರ ಮಾತು ಬೇಸರಕ್ಕೆ ಕಾರಣವಾದ ಬಗೆಯನ್ನು ಚರ್ಚಿಸಿರಿ.

II. ಕೆಳಗಿನ **ಮೂರು** ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿರಿ. **(3×5=15)**

1) ಸೂರ್ಯೋದಯವು ಪ್ರಕೃತಿಯ ಮೇಲೆ ಬೀರುವ ಪ್ರಭಾವವನ್ನು ''ನಿಸರ್ಗ'' ಹಾಡು ಹೇಗೆ ಸೆರೆ ಹಿಡಿದಿದೆ ?

**ಅಥವಾ**

'ಬೆಳಗು' ಕವನದ ಭಾವ, ಒಳಾರ್ಥಗಳ ಚಿಂತನೆಯ ಕುರಿತು ಬರೆಯಿರಿ.

2) ನಾಡು-ನುಡಿ ಭಾವವನ್ನು ಉದ್ದೀಪಿಸುವ ಪಂಜೆಯವರ ಬರವಣಿಗೆಯನ್ನು ವಿವರಿಸಿರಿ.

**ಅಥವಾ**

ಕೇರಿಯೊಳಗೆ ನಡೆದ ಬಸ್ಸು ದುರ್ಘಟನೆಯ ಕುರಿತು ಲೇಖಕರ ಅಭಿಪ್ರಾಯಗಳನ್ನು ಸಂಗ್ರಹಿಸಿರಿ.

3) ಹುಲಿ-ದನ ಆಟದ ವೈಶಿಷ್ಟ್ಯವೇನು ? ಅದರ ಸಾಂಕೇತಿಕ ಆಯಾಮಗಳೇನು ? ವಿವರಿಸಿರಿ.

**ಅಥವಾ**

ಪರಸ್ಪರ ಸಹಬಾಳ್ವೆಯ ಅವಶ್ಯಕತೆಯನ್ನು ದೇವರ ಮನೆಯವರು ಹೇಗೆ ನಿರೂಪಿಸಿದ್ದಾರೆ ? ವಿವರಿಸಿರಿ.

III. **ಒಂದು** ಪದ್ಯದ ಸಂದರ್ಭ ಸೂಚಿಸಿ, ಭಾವವನ್ನು ವಿವರಿಸಿರಿ. **(1×5=5)**

1) ದೇಶಪ್ರೇಮವ ತಿಳಿಸುವವು
ಸ್ವಾತಂತ್ರ್ಯ ಪಾಠ ಕಲಿಸುವವು
ನಮಗಿಂದು ಹುರುಪು ಗೊಡುತಿಹವು
ಮೌನದಿ ಹಾಡುತಲೀ ಹಾಡು
''ನನ್ನದು ಈ ಕನ್ನಡ ನಾಡು''

**ಅಥವಾ**

2) ಈ ಮರಳು ನನಗೆಂದು
ಆ ಮರಳು ತನಗೆಂದು
ಹೊಡೆದಾಡಿ 'ಜತೆ' ಬಿಟ್ಟು
ಆಟವಾಡಿದ ದಿವಸ
ನೆನಪಿದೆಯೆ ನಿನಗೆ ?

S.D.M.C. OF BUSINESS MANAGEMENT LIBRARY





IV. **ಎರಡು** ವಾಕ್ಯಗಳ ಸಂದರ್ಭ ಸೂಚಿಸಿ ವಿವರಿಸಿರಿ. **(2×4=8)**

1) ಭಾರತದ ಗುರುಕುಲವು ನೋಡು.

2) ಎಲ್ಲಿ ಹೋಯಿತು ಇದರ ತುಂಟತನ.

3) ಮರೆತು ಜಗ ಮಲಗಿರಲು, ಅರಿಯಲಾ ಸೋಜಿಗವ.

Shri Dharmasthala Manjunatheshwara
College of Business Management Library
MANGALORE - 575 003

4) ಇದು ಬರಿ ಬೆಳಗಲ್ಲೋ ಅಣ್ಣಾ.

V. ಕೆಳಗಿನ ಪ್ರಶ್ನೆಗಳಿಗೆ **ಒಂದೊಂದು** ವಾಕ್ಯದಲ್ಲಿ ಉತ್ತರ ಬರೆಯಿರಿ. **(1×8=8)**

1) 'ಆನಂದ ಕಂದ' – ಇದು ಯಾರ ಕಾವ್ಯನಾಮ ?

2) ಸ್ವರ್ಗದಲ್ಲಿದ್ದ ಪಾರಿಜಾತವು ಯಾರ ಮುಖಾಂತರ ಭೂಲೋಕಕ್ಕೆ ಬಂದಿದೆ ?

3) ಜನಪದ ಹಾಡುಗಳು ಹೆಚ್ಚಾಗಿ ಯಾವ ಛಂದಸ್ಸಿನಲ್ಲಿವೆ ?

4) ಕ್ರಿ.ಶ. 450 ರ ಕನ್ನಡದ ಮೊದಲ ಶಾಸನ ಯಾವುದು ?

5) ಪಂಜೆಯವರ First Love–ಪ್ರಥಮ ಪ್ರೇಮ ಎಂಬ ಕೀರ್ತಿಗೆ ಪಾತ್ರವಾದ ಸಾಹಿತ್ಯ ಪ್ರಕಾರ ಯಾವುದು ?

6) ಗುತ್ತಿ–ತಿಮ್ಮಿಯ ಜೊತೆಗಾರನಾಗಿದ್ದ ನಾಯಿಯ ಹೆಸರೇನು ?

7) 'ಮನೋವಿಜ್ಞಾನದ ಹಾಡು' – ಇದು ಯಾರು ಬರೆದ ಲೇಖನ ?

8) 'ಸ್ವಲ್ಪ ಮಾತಾಡಿ ಪ್ಲೀಸ್' – ಕೃತಿಯಿಂದ ಪಠ್ಯಕ್ಕೆ ಆರಿಸಿ ಕೊಂಡಿರುವ ಲೇಖನ ಯಾವುದು ?

---